# KANNADA

## (Second Language)

## (Three hours)

---

***Answers to this Paper must be written on the paper provided separately.***
*You will **not** be allowed to write during the first **15** minutes.*
*This time is to be spent in reading the question paper.*
***The time given at the head of this Paper is the time allowed for writing the answers.***

---

*This paper comprises of two Sections; **Section A** and **Section B**.*
*Attempt **all** the questions from **Section A.***
*Attempt **four** questions from **Section B,** answering at least **one** question each from the **two** books you have studied and **any two** other questions.*
*The intended marks for questions or parts of questions are given in brackets [ ].*

---

## SECTION-A (40 Marks)

## Attempt all questions.

### Question 1

Write a short composition in **Kannada** of approximately 250 words on any **one** of the following topics**:-** **[15]**

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಸುಮಾರು ೨೫೦ ಪದಗಳ ಸಂಕ್ಷಿಪ್ತ ಪ್ರಬಂಧ ಬರೆಯಿರಿ:–

(i) ಸೂರ್ಯ ಮುಳುಗುವ ಹೊತ್ತು, ಆಕಾಶದಲ್ಲಾಗುವ ವಿವಿಧ ಬಣ್ಣಗಳ ಕಳೆ ನೋಡಿದಷ್ಟೂ ನೋಡಬೇಕೆನ್ನುವ ಆಕರ್ಷಣೆಗಳು, ಸುಂದರ ಪ್ರಕೃತಿ ಚಿತ್ರಣ ಹಾಗೂ ನಿಮ್ಮ ಅನಿಸಿಕೆಗಳನ್ನು ಪ್ರಬಂಧದಲ್ಲಿ ತಿಳಿಸಿ.

(ii) ಭಾರತರತ್ನ ಪ್ರಶಸ್ತಿಯನ್ನು ಪಡೆದಿರುವ ಸಚಿನ್ ತೆಂಡೂಲ್ಕರ್ ರವರಿಗೆ ಕ್ರಿಕೆಟ್‌ನಲ್ಲಿದ್ದ ಆಸಕ್ತಿ, ಸತತ ಪರಿಶ್ರಮ, ಏಕಾಗ್ರತೆ, ಸೋಲು–ಗೆಲುವನ್ನು ಒಂದೇ ಭಾವನೆಯಿಂದ ಒಪ್ಪಿಕೊಳ್ಳುವ ಮನಸ್ಸು ಹಾಗೂ ಗುರಿ ಸಾಧನೆಯನ್ನು ಕುರಿತು ನಿಮ್ಮ ಮಾತುಗಳಲ್ಲಿ ವಿವರಿಸಿ.

(iii) ನಗರಗಳು ಸ್ವಚ್ಛ ಪರಿಸರವನ್ನು ಹೊಂದಿರಬೇಕಾದರೆ ಕಸದ, ತ್ಯಾಜ್ಯವಸ್ತುಗಳ ವಿಂಗಡನೆ ಮತ್ತು ವಿಲೇವಾರಿ ಕೆಲಸವು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಸ್ವಚ್ಛ ಪರಿಸರದ ಬಗ್ಗೆ ಅರಿವು ಮೂಡಿಸುವುದರಲ್ಲಿ ನಿಮ್ಮ ಅಭಿಪ್ರಾಯಗಳೇನು? ಚರ್ಚಿಸಿ.

(iv) ಆ ದಿನ.... ನಾನು.... ರಸ್ತೆಯ ಬದಿಯಲ್ಲಿದ್ದ ಒಬ್ಬ ಭಿಕ್ಷುಕನ ವೃತ್ತಾಂತವನ್ನು ಕೇಳಿದೆ.... ಆತ ತನ್ನ ಜೀವನದ ಕಥೆಯನ್ನು ಹೀಗೆ ಹೇಳಿದ (ಆ ಭಿಕ್ಷುಕನ ಕಥೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ).

---

www.careerindia.com

(v) ಕೆಳಗೆ ಕೊಟ್ಟಿರುವ ಚಿತ್ರವನ್ನು ಗಮನಿಸಿ ಆ ಚಿತ್ರವು ನಿಮಗೆ ಏನನ್ನು ಸೂಚಿಸುತ್ತಿದೆ ಎಂಬುದನ್ನು ಆಧರಿಸಿ ಒಂದು ಸನ್ನಿವೇಶ ಅಥವಾ ಘಟನೆಯನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.  ಚಿತ್ರಕ್ಕೂ ಮತ್ತು ನಿಮ್ಮ ವಿವರಣೆಗೂ ಸ್ಪಷ್ಟವಾದ ಸಂಬಂಧವಿರಬೇಕು.



**Question 2**

Write a letter in **Kannada** in approximately 120 words on any **one** of the topics given below:- **[7]**

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಆರಿಸಿಕೊಂಡು ಸುಮಾರು 120 ಪದಗಳಲ್ಲಿ ಒಂದು ಪತ್ರವನ್ನು ಬರೆಯಿರಿ:–

(i) ಭೂಕಂಪಕ್ಕೊಳಗಾದ ಒಂದು ಪ್ರದೇಶಕ್ಕೆ ನೀವು ಸ್ವಯಂಸೇವಕರಾಗಿ ಹೋಗಿದ್ದೀರಿ. ಆ ಸ್ಥಳದಲ್ಲಿ ನೀವು ಕೈಗೊಂಡ ಸೇವೆಗಳ ವಿವರಣೆ ನೀಡಿ ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.

(ii)

**ಅಥವಾ**

(iii) ಇತ್ತೀಚಿನ ದಿನಗಳಲ್ಲಿ ಬಸ್ಸುಗಳ ಸಂಚಾರದ ಸಮಯದಲ್ಲಿ ದಿಢೀರನೆ ಬಸ್ಸುಗಳಲ್ಲಿ ಬೆಂಕಿ ಹತ್ತಿಕೊಂಡು ಪ್ರಯಾಣಿಕರ ಸಾವು ನೋವಿಗೆ ಕಾರಣವಾಗಿದೆ. ಇನ್ನು ಮೇಲಾದರೂ ಇಂತಹ ದುರ್ಘಟನೆಗಳು ಸಂಭವಿಸಿದಂತೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳುವಂತೆ ಮನವಿ ಮಾಡುತ್ತಾ ನಿಮ್ಮ ನಗರದ ಸಾರಿಗೆ ಸಂಸ್ಥೆಯ ಮುಖ್ಯಾಧಿಕಾರಿಯವರಿಗೊಂದು ಪತ್ರ ಬರೆಯಿರಿ.

www.careerindia

CAREERINDIA

## Question 3

Read the following passage carefully and answer in **Kannada** the questions that follow:-

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:–

ಆ ಕಾಲದಲ್ಲಿ ನಾನು ಶಿಕ್ಷಕರಿಗಾಗಲಿ ಸ್ನೇಹಿತರಿಗಾಗಲಿ ಎಂದೂ ಸುಳ್ಳು ಹೇಳಿದ ನೆನಪಿಲ್ಲ. ನಾನು ಬಹಳ ನಾಚಿಕೆಯ ಸ್ವಭಾವದವನಾಗಿದ್ದೆನು. ಯಾರ ಜತೆಗೂ ಸೇರುತ್ತಿರಲಿಲ್ಲ. ನನ್ನ ಪುಸ್ತಕ, ಪಾಠಗಳು, ಇವೇ ನನ್ನ ಮಿತ್ರರು, ಗಂಟೆ ಹೊಡೆಯುವ ಹೊತ್ತಿಗೆ ಶಾಲೆಗೆ ಹೋಗುವುದು, ಶಾಲೆ ಮುಗಿಯುತ್ತಲೇ ಮನೆಗೆ ಓಡುವುದು, ಇದು ನನ್ನ ದಿನನಿತ್ಯದ ಅಭ್ಯಾಸವಾಗಿತ್ತು. ನಾನು ನಿಜವಾಗಿಯೂ ಓಡಿಯೇ ಮನೆ ಸೇರುತ್ತಿದ್ದೆ. ಏಕೆಂದರೆ ನನಗೆ ಯಾರೊಂದಿಗೂ ಮಾತನಾಡುವ ಧೈರ್ಯವಿರಲಿಲ್ಲ. ಯಾರಾದರೂ ನನ್ನನ್ನು ಕುಚೋದ್ಯ ಮಾಡುವರೋ ಎಂಬ ಭಯ ನನಗಿತ್ತು.

ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆಯೊಂದನ್ನು ಹೇಳಬೇಕು. ಇನ್‌ಸ್ಪೆಕ್ಟರ್ ಮಿ. ಗೈಲ್ಸ್ ಪರಿಶೀಲನೆಗಾಗಿ ಶಾಲೆಗೆ ಬಂದಿದ್ದರು. ಅವರು ಮೊದಲನೆಯ ತರಗತಿಯ ವಿದ್ಯಾರ್ಥಿಗಳಿಗೆ ಐದು ಪದಗಳನ್ನು ಬರೆಯಲು ಕೊಟ್ಟರು. ಅವುಗಳ ಪೈಕಿ ಕಿಟಲ್ (Kettle) ಎಂಬ ಪದವೂ ಒಂದು. ನಾನು ಅದನ್ನು ತಪ್ಪಾಗಿ ಬರೆದೆ. ನಮ್ಮ ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ನನ್ನನ್ನು ಎಚ್ಚರಿಸಲು ಪ್ರಯತ್ನಿಸಿದರು. ನಾನು ಆ ಸೂಚನೆಯಂತೆ ನಡೆಯಲಿಲ್ಲ. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ನನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ನಮ್ಮ ಉಪಾಧ್ಯಾಯರ ಉದ್ದೇಶ. ಅದು ನನಗೆ ಒಪ್ಪಿಗೆಯಾಗಲಿಲ್ಲ. ಏಕೆಂದರೆ ನಾವು ಕಾಪಿ ಮಾಡದಂತೆ ನೋಡಿಕೊಳ್ಳುವುದೇ ಉಪಾಧ್ಯಾಯರ ಕೆಲಸವೆಂದು ನಾನು ತಿಳಿದಿದ್ದೆ. ಇದರ ಪರಿಣಾಮವಾಗಿ ನನ್ನನ್ನು ಹೊರತು ಉಳಿದ ಹುಡುಗರೆಲ್ಲ ಐದು ಪದಗಳನ್ನೂ ಸರಿಯಾಗಿ ಬರೆದಿದ್ದರು. ನಾನೊಬ್ಬನೇ ದಡ್ಡ. ಇದಾದ ಮೇಲೆ, ಉಪಾಧ್ಯಾಯರು ನನ್ನ ಮೂರ್ಖತನವನ್ನು ನನಗೆ ತೋರಿಸುವುದಕ್ಕೆ ಪ್ರಯತ್ನಪಟ್ಟರು. ಅದರಿಂದ ಅವರಿಗೆ ವೃಥಾ ಶ್ರಮವಾಯಿತೇ ಹೊರತು ಕಾಪಿ ಮಾಡುವ ಕಲೆ ನನಗೆ ಕೊನೆಗೂ ಬರಲೇ ಇಲ್ಲ.

ಇಷ್ಟಾದರೂ ಉಪಾಧ್ಯಾಯರಲ್ಲಿ ನನಗಿದ್ದ ಗೌರವ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಏಕೆಂದರೆ ಹಿರಿಯರ ದೋಷಗಳನ್ನು ಎಣಿಸದಿರುವುದು ನನ್ನ ಸ್ವಾಭಾವಿಕ ಗುಣವಾಗಿತ್ತು. ಅನಂತರ ಆ ಉಪಾಧ್ಯಾಯರ ಇತರ ದೋಷಗಳೂ ನನಗೆ ತಿಳಿದು ಬಂದವು. ಆದರೆ ಅವರಲ್ಲಿ ನನ್ನ ಆದರ ಭಾವ ಕಡಿಮೆಯಾಗಲಿಲ್ಲ. ಹಿರಿಯರ ಅಣತಿಯನ್ನು ಪಾಲಿಸುವುದು ನಮ್ಮ ಕರ್ತವ್ಯ. ಅವರ ಕಾರ್ಯವನ್ನು ಪರೀಕ್ಷಿಸುವುದಲ್ಲ ಎಂಬುದನ್ನು ನಾನು ಅರಿತಿದ್ದೆ.

ಇದೇ ಸಮಯದಲ್ಲಿ ನಡೆದ ಮತ್ತೆರಡು ಸಂಗತಿಗಳು ಯಾವಾಗಲೂ ನನ್ನ ನೆನಪಿನಲ್ಲಿ ಉಳಿದಿವೆ. ಪಠ್ಯಪುಸ್ತಕಗಳನ್ನು ಹೊರತು ಬೇರೆ ಏನನ್ನೂ ಓದುವುದು ಸಾಧಾರಣವಾಗಿ ನನಗೆ ಸೇರುತ್ತಿರಲಿಲ್ಲ. ನಿತ್ಯದ ಪಾಠಗಳನ್ನಂತೂ ಓದಲೇಬೇಕಾಗಿತ್ತು. ಉಪಾಧ್ಯಾಯರು ನನ್ನನ್ನು ಗದರಿಸುವುದು ನನಗೆ ಇಷ್ಟವಿರಲಿಲ್ಲ. ಹೀಗೆ ಪಾಠಗಳನ್ನೇ ಸರಿಯಾಗಿ ಓದುತ್ತಿರಲಿಲ್ಲವೆಂದ ಮೇಲೆ, ಇನ್ನು ಇತರ ಹೆಚ್ಚಿನ ವ್ಯಾಸಂಗದ ಪ್ರಶ್ನೆ ಎಲ್ಲಿ ಬಂತು. ಆದರೆ ಹೇಗೋ ನಮ್ಮ ತಂದೆ ಕೊಂಡುಕೊಂಡು ಬಂದಿದ್ದ ಒಂದು ಪುಸ್ತಕ ನನ್ನ ಕಣ್ಣಿಗೆ ಬಿತ್ತು. ಅದರ ಹೆಸರು 'ಶ್ರವಣನ ಪಿತೃಭಕ್ತಿ ನಾಟಕ'. ಅದನ್ನು ನಾನು ಅತ್ಯಂತ ಆಸಕ್ತಿಯಿಂದ ಓದಿದೆ. ಅದೇ ಸಮಯದಲ್ಲಿ ಸಂಚಾರೀ ಬೊಂಬೆ ಪ್ರದರ್ಶಕರು ನಮ್ಮ ಊರಿಗೆ ಬಂದರು. ಅವರು ನನಗೆ ತೋರಿಸಿದ ಒಂದು ಚಿತ್ರ, ಶ್ರವಣ ತನ್ನ ಕುರುಡು ತಂದೆ ತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ಚಿತ್ರ, ಆ ಪುಸ್ತಕ, ಆ ದೃಶ್ಯ, ಎರಡೂ ನನ್ನ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದವು. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಕರಿಸು ಎಂದು ನನಗೆ ನಾನೇ ಹೇಳಿಕೊಂಡೆ. ಶ್ರವಣ ಮರಣ

www.careerindia.com

ಹೊಂದಲು, ಅವನ ಮಾತಾಪಿತೃಗಳ ಆರ್ತವಿಲಾಪ ನನ್ನ ಕಿವಿಗೆ ಈಗಲೂ ಕೇಳುವಂತಿದೆ. ಆ ರಾಗ, ನನ್ನ ಹೃದಯವನ್ನು ಕರಗಿಸಿತು. ನಮ್ಮ ತಂದೆ ಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ಚಿತ್ರ, ಆ ಪುಸ್ತಕ, ಆ ದೃಶ್ಯ, ಎರಡೂ ನನ್ನ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದವು. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಕರಿಸು ಎಂದು ನನಗೆ ನಾನೇ ಹೇಳಿಕೊಂಡೆ. ಶ್ರವಣ ಮರಣ ಹೊಂದಲು, ಅವನ ಮಾತಾಪಿತೃಗಳ ಆರ್ತವಿಲಾಪ ನನ್ನ ಕಿವಿಗೆ ಈಗಲೂ ಕೇಳುವಂತಿದೆ. ಆ ರಾಗ, ನನ್ನ ಹೃದಯವನ್ನು ಕರಗಿಸಿತು. ನಮ್ಮ ತಂದೆ ಕೊಂಡುಕೊಟ್ಟಿದ್ದ ರಾಗಮಾಲಿಕೆಯಲ್ಲಿ ಅದನ್ನು ಬಾರಿಸಲು ಕಲಿತೆ.

**ಪ್ರಶ್ನೆಗಳು:**

(i) ಲೇಖಕರು ಶಾಲೆ ಮುಗಿಯುತ್ತಲೇ ಮನೆಗೆ ಓಡಿ ಹೋಗಲು ಕಾರಣವೇನು? **[2]**

(ii) ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆಯೇನು? **[2]**

(iii) ಲೇಖಕರಿಗೆ ಕಾಪಿ ಮಾಡುವ ಕಲೆ ಕೊನೆಗೂ ಬರಲೇ ಇಲ್ಲ ಏಕೆ? **[2]**

(iv) ಗುರು–ಹಿರಿಯರ ಬಗ್ಗೆ ಲೇಖಕರಿಗಿದ್ದ ಗೌರವವೇನು? **[2]**

(v) ತಂದೆ ಕೊಂಡುಕೊಂಡು ಬಂದಿದ್ದ ಪುಸ್ತಕದ ಹೆಸರೇನು? ಅದರಲ್ಲಿ ಅಡಗಿದ್ದ ಆದರ್ಶವೇನು? **[2]**

## Question 4

Answer the following questions according to the instructions given:-
ಕೆಳಗಿನ ಪ್ರಶ್ನೆಗಳಿಗೆ ಸೂಚನೆಗಳಿಗನುಸಾರವಾಗಿ ಉತ್ತರ ಬರೆಯಿರಿ:

(i) ಯಾವುದಾದರೂ ಎರಡು ಪದಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ. **[1]**
ಗೃಹ, ಪರಿಮಳ, ಪೃಥ್ವಿ, ರಾಜ

(ii) ಯಾವುದಾದರೂ ಎರಡು ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. **[1]**
ಆಡಂಬರ, ಸ್ವತಂತ್ರ, ಶುದ್ಧ, ಅನ್ಯಾಯ

(iii) ಯಾವುದಾದರೂ ಎರಡು ಪದಗಳಿಗೆ ಲಿಂಗ ಬದಲಿಸಿ. **[1]**
ಒಡೆಯ, ಗಾಯಕಿ, ಅಧ್ಯಕ್ಷೆ, ವೈದ್ಯೆ

(iv) ಯಾವುದಾದರೂ ಎರಡು ಪದಗಳಿಗೆ ವಚನ ಬದಲಿಸಿ. **[1]**
ಕಿಟಿಕಿ, ಹುಡುಗ, ಬಳ್ಳಿಗಳು, ಕಲಾವಿದ

(v) ಈ ವಾಕ್ಯವನ್ನು ಸರಿಪಡಿಸಿ ಬರೆಯಿರಿ. **[1]**
ಜನರನ್ನು ಹೈಯಾನ್ ಬಲಿ ತೆಗೆದುಕೊಂಡಿತು ಸಾವಿರಾರು ಚಂಡ ಮಾರುತವು.

(vi) ಈ ವಾಕ್ಯವನ್ನು ವರ್ತಮಾನ ಕಾಲದಲ್ಲಿ ಬರೆಯಿರಿ. **[1]**
ಉತ್ತಮ ಪುಸ್ತಕಗಳು ನಮ್ಮ ಜ್ಞಾನವನ್ನು ಹೆಚ್ಚಿಸುವವು.

(vii) ಬಿಟ್ಟ ಸ್ಥಳಗಳಲ್ಲಿ ಸೂಕ್ತ ವಿಭಕ್ತಿ ಪ್ರತ್ಯಯವನ್ನು ಬರೆಯಿರಿ. **[1]**
ಬೋರಣ್ಣನು ಕುರಿ ______________ ಮೇಯಿಸಲು ಹೊಲ __________ ಹೋದನು.

(viii) ಕೆಳಗಿನ ಗಾದೆ ಮಾತನ್ನು ಪೂರ್ಣಗೊಳಿಸಿ. **[1]**
ಹಲ್ಲಿದ್ದರೆ ಕಡಲೆಯಿಲ್ಲ, ____________

www.careerindia.com

CAREERINDIA

## SECTION-B ( 40 Marks )

*Attempt **four** questions from this Section*

*You must answer at least **one** question from each of the two books you have studied and any **two** other questions.*

**ಸಾಹಿತ್ಯ ಸಂಗಮ – ಸಣ್ಣ ಕಥೆಗಳು**

**SAHITYA SANGAMA – SHORT STORIES**

### Question 5

Read the extract given below and answer in **Kannada** the questions that follow:-

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:–

ತೀರ್ಥ ಯಾತ್ರೆಗೆ ಹೊರಟ ದಯಾಮಯನಾದ ಶಿವಭೂತಿಯೆಂಬ ಬ್ರಾಹ್ಮಣನು ಬಾಯಾರಿ, ಅದೇ ಬಾವಿಗೆ ನೀರು ಕುಡಿಯಲು ಬರುತ್ತಾನೆ. ಆ ಬಾವಿಯಿಂದ ನೀರು ಪಡೆಯಲು ಒಂದು ಬಳ್ಳಿಗೆ, ತನ್ನ ಸಣ್ಣ ಕಳಶಗಿಂಡಿಯನ್ನು ಕಟ್ಟಿ ಬಾವಿಯಲ್ಲಿ ಬಿಡುತ್ತಾನೆ. ನೀರು ತುಂಬಿದ ಗಿಂಡಿಯನ್ನು ಮೇಲೆತ್ತುವಾಗ ಆ ಹುಲಿಯು ಹಿಡಿದು ನೇತಾಡುತ್ತಿತ್ತು.

**ಶಿವಭೂತಿಯ ಕಥೆ – (ಪಂಚತಂತ್ರ)**

**SHIVABHUTIYA KATHE – (PANCHATANTRA)**

**ಪ್ರಶ್ನೆಗಳು:**

(i) ಶಿವಭೂತಿ ಯಾರು? ಆತನು ನೀರನ್ನು ಹೇಗೆ ಪಡೆದನು? **[2]**

(ii) ಹುಲಿಯು ಬಾವಿಯಲ್ಲಿ ಬೀಳಲು ಕಾರಣವೇನು? **[2]**

(iii) ಶಿವಭೂತಿಯನ್ನು ಕಂಡ ಕಪಿಯು ಮತ್ತು ಹುಲಿಯು ಹೇಗೆ ಸತ್ಕರಿಸಿದವು? **[3]**

(iv) ಹಾವು ಶಿವಭೂತಿಯನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದ ಪ್ರಸಂಗವೇನು? **[3]**

### Question 6

Read the extract given below and answer in **Kannada** the questions that follow:-

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:–

"ಓ' ........ ಎಂದು ರಾಗ ಎಳೆದು ಸುಮ್ಮನಾದ ಕರೀಮನ ಹೃದಯದಲ್ಲಿ ಯಾವುದೋ ಅಸ್ಪಷ್ಟಯಾತನೆ ಕಾಣಿಸಿಕೊಂಡಿತು. ಕೈಯಲ್ಲಿ, ಪುಸ್ತಕಗಳನ್ನು ಹೊತ್ತಿದ್ದ ಜನಾರ್ಧನನನ್ನು ನೋಡಿ ಅಸೂಯೆಯಾದಂತಾಯಿತು.

**ತುಚೀಪ್, ತುದಾಂಡ್, ತುಬದ್ – ರೆಡೀ – (ಚದುರಂಗ)**

**TUCHIP, TUDAND, TUBAD – READY – (CHADURANGA)**

**ಪ್ರಶ್ನೆಗಳು:**

(i) ಕರೀಮನು ಎಲ್ಲಿ ಕೆಲಸ ಮಾಡುತ್ತಿದ್ದ? ಏಕೆ? **[2]**

(ii) ಗೆಳೆಯರೆಲ್ಲಾ ಯಾರನ್ನು ಗೇಲಿ ಮಾಡುತ್ತಿದ್ದರು? ಸಂದರ್ಭವೇನು? **[2]**

(iii) ಜನಾರ್ಧನನನ್ನು ಕರೀಮನಿಗೆ ಶಾಲೆಗೆ ಹೋಗುವ ಅವಶ್ಯಕತೆಯ ಕುರಿತು ಹೇಳಿದ ಮಾತುಗಳೇನು? **[3]**

(iv) ಕರೀಮನನ್ನು ಹುಡುಗರು 'ಶಹಬಾಸ್' ಎಂದು ಘೋಷಣೆ ಮಾಡಲು ಕಾರಣವೇನು? **[3]**

www.careerindia.com

CAREERINDIA

## Question 7

Read the extract given below and answer in **Kannada** the questions that follow:-
ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:–

"ಸ್ವಾಮೀ, ನಮಗೆ ಅಂತ್ಯಕಾಲವು ಬಂದಿದೆ" ಎನ್ನುತ್ತ ನಡುಗುತ್ತಿದ್ದ ಹೆಣ್ಣನ್ನು ಜೊತೆಗಾರ ಪಾರಿವಾಳವು ಸಂತೈಸುತ್ತ" ಅದೇನೆಂದು ಹೇಳಬಾರದೇ? ಎಂದಿತು. ಆಗ, "ಕೆಳಗೆ ನೋಡಿ ನಮ್ಮನ್ನು ಬೇಟೆಯಾಡಲು ಸಿದ್ಧನಾಗಿ ಒಬ್ಬ ಬೇಡನು ನಿಂತಿದ್ದಾನೆ

**ತಾಳ್ಮೆಗೆ ಒಲಿದ ಅದೃಷ್ಟ – (ಎನ್. ದಾಮೋದರ್)**

**THALMEGE OLIDA ADRUSHTA – (N. DAMODHARA)**

**ಪ್ರಶ್ನೆಗಳು:**

(i) ಜೋಡಿ ಪಾರಿವಾಳಗಳು ತಮ್ಮಷ್ಟಕ್ಕೆ ಸುಖವಾಗಿದ್ದಿದ್ದು ಹೇಗೆ? **[2]**

(ii) ಹೆಣ್ಣು ಪಾರಿವಾಳವು ಏಕೆ ಬಿಕ್ಕಳಿಸಿತು? **[2]**

(iii) ಬೇಟೆಗಾರ ಮತ್ತು ಗಿಡುಗ ಸತ್ತದ್ದು ಯಾವ ಪರಿಯಲ್ಲಿ? **[3]**

(iv) ಈ ಕಥೆಯಿಂದ ಕಲಿಯುವ ನೀತಿಯೇನು? ಮನುಷ್ಯನು ಉತ್ತಮ ಬದುಕನ್ನು ರೂಪಿಸಿಕೊಳ್ಳುವ ಮಾರ್ಗ ಯಾವುದು? **[3]**

**ಸಾಹಿತ್ಯ ಸಂಗಮ – ಕವನಗಳು**

**SAHITYA SANGAMA – POEMS**

## Question 8

Read the extract given below and answer in **Kannada** the questions that follow:
ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

**"ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ**
**ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ"**

**ವಚನಗಳು – (ಬಸವಣ್ಣ ಮತ್ತು ಅಕ್ಕಮಹಾದೇವಿ)**

**VACHANAGALU – (BASAVANNA & AKKAMAHADEVI)**

**ಪ್ರಶ್ನೆಗಳು:**

(i) ಮೇಲಿನ ವಚನದ ಕರ್ತೃ ಯಾರು? ಮೇಲಿನ ಸಾಲುಗಳ ಭಾವಾರ್ಥವನ್ನು ತಿಳಿಸಿ. **[2]**

(ii) ಸಿರಿತನದ ಬಗ್ಗೆ ಕವಿಯ ನಿಲುವೇನು? **[2]**

(iii) ಅಕ್ಕನ ಅಂಕಿತನಾಮವೇನು? ಅಕ್ಕನ ಅಗತ್ಯಗಳನ್ನು ದೇವರು ಹೇಗೆ ಪೂರೈಸುತ್ತಾನೆಂಬುದನ್ನು ತಿಳಿಸಿ. **[3]**

(iv) ಲೋಕದ ನಿಂದನೆಯನ್ನು ಸ್ವೀಕರಿಸಲು ಅಕ್ಕಮಹಾದೇವಿಯು ಹೇಳಿದ ಸಂದೇಶವೇನು? **[3]**

www.careerindia.com

## Question 9

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

**ತಿರುಕನೋರ್ವನೂರ ಮುಂದೆ**
**ಮುರುಕು ಧರ್ಮಶಾಲೆಯಲ್ಲಿ**
**ಒರಗಿರುತ್ತಲೊಂದು ಕನಸಕಂಡನೆಂತೆನೆ**
**ಪುರದ ರಾಜ ಸತ್ತನವಗೆ**
**ವರಕುಮಾರರಿಲ್ಲದಿರಲು**

**ತಿರುಕನ ಕನಸು – (ಮುಪ್ಪಿನ ಷಡಕ್ಷರಿ)**
**TIRUKANA KANASU – (MUPPINA SHADAKSHRI)**

**ಪ್ರಶ್ನೆಗಳು:**

(i) ತಿರುಕನು ಹಿಗ್ಗುತ್ತಿರಲು ಕಾರಣವೇನು? **[2]**

(ii) ತಿರುಕನಿಗೆ ಸಂತಾನ ಭಾಗ್ಯ ಒದಗಿದ್ದು ಹೇಗೆ? **[2]**

(iii) ರಾಜನಾದ ತಿರುಕನು ತನ್ನ ಮಂತ್ರಿಗಳಿಗೆ ಹೇಳಿದ ಆದೇಶಗಳೇನು? **[3]**

(iv) ತಿರುಕನ ಕನಸು ನುಚ್ಚು ನೂರಾದದ್ದು ಹೇಗೆ? **[3]**

## Question 10

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

**ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು।**
**ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಯೆ॥**
**ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ।**
**ಎಲ್ಲರೊಳಗೊಂದಾಗು – ಮಂಕುತಿಮ್ಮ**

**ಮಂಕುತಿಮ್ಮನ ಕಗ್ಗ – (ಡಿ.ವಿ.ಗುಂಡಪ್ಪ)**
**MANKUHIMMANA KAGGA – (D.V. GUNDAPPA)**

**ಪ್ರಶ್ನೆಗಳು:**

(i) ಜಗವು ಯಾವುದರ ಲೆಕ್ಕವಿರಿಸಲಿಲ್ಲ ಏಕೆ? **[2]**

(ii) ಮೇಲಿನ ಪದ್ಯದ ಕವಿ ಯಾರು? ಸಾಲುಗಳಂತೆ ಮನುಷ್ಯನ ಬಾಳ್ವೆ ಹೇಗಿರಬೇಕು? **[2]**

(iii) ಬದುಕು ಹಾಗೂ ವಿಧಿಯ ಕುರಿತು ಕವಿಯ ಅಭಿಪ್ರಾಯವೇನು? **[3]**

(iv) ನಗುವಿನ ಮಹತ್ವದ ಬಗ್ಗೆ ಕವಿಯ ಆಶಯಗಳೇನು? **[3]**

www.careerindia.com

CAREERINDIA

**ನಾಟ್ಯ ಮಯೂರಿ – ಕಾದಂಬರಿ – NOVEL – NATYA MAYURI**
**(ಡಾ॥ ಸಾ. ಶಿ. ಮರುಳಯ್ಯ) – (DR. SA. SHI. MARULAYYA)**

## Question 11

Read the extract given below and answer in **Kannada** the questions that follow:
ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

ಅಂದಿನ ಆರಂಭದ ನೃತ್ಯ ಶಿವ ತಾಂಡವ. ಶಿವನ ಕಣ್ಣುಗಳು ಕೆಂಡದುಂಡೆಗಳನ್ನು ಉರುಳಿಸುತ್ತಿವೆ. ಅವನ ಹಣೆಗಣ್ಣು ಜ್ವಾಲೆಯನ್ನು ಮುಕ್ಕಳಿಸುತ್ತಿದೆ. ಅವನ ಕುಣಿತಕ್ಕೆ ನೆಲ ನಡುಗುತ್ತಿದೆ.

**ಪ್ರಶ್ನೆಗಳು:**

(i) ನಾಟ್ಯ ನಡೆಯುತ್ತಿದ್ದ ಪ್ರಾಂಗಣದ ಬಳಿ ಬಂದವರು ಯಾರು? ಆತ ನೋಡಲು ಹೇಗಿದ್ದನು? **[2]**

(ii) ದಣಾಯಕ ಮಾರಸಿಂಗನು ತನ್ನ ರಾಜ್ಯಕ್ಕೆ ನೀಡಿದ ಕೊಡುಗೆಯನ್ನು ಯುವರಾಜ ವಿಷ್ಣುವರ್ಧನನು ಹೇಗೆ ಹೊಗಳಿದನು? **[2]**

(iii) ಶಾಂತಲೆಯ ಯಾವ ನೃತ್ಯವನ್ನು ಮಾಡಬೇಕೆಂದು ನಿರ್ಧಾರವಾಯಿತು? ಆಕೆಯ ನೃತ್ಯದ ವೈಖರಿಯೇನು? **[3]**

(iv) ವಿಷ್ಣುವರ್ಧನನು ದಣಾಯಕ ಮಾರಸಿಂಗಮಯ್ಯ ಹಾಗೂ ಪ್ರಾಂತ್ಯದ ಜನರ ಗೌರವಕ್ಕೆ ಪಾತ್ರನಾದ ಬಗೆ ಹೇಗೆ? **[3]**

## Question 12

Read the extract given below and answer in **Kannada** the questions that follow:
ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

ಅಧಿಕಾರವೆಂಬುದು ಸೇವೆಯ ಕರ್ಮಭೂಮಿ ಸ್ವೇಚ್ಛಾಚಾರದ ವೇದಿಕೆಯಲ್ಲ, ಅದೊಂದು ಕಾಯಕದ ಕೇಂದ್ರ ಕಾರ್ಯಾಲಯ ಕಟುಕನ ಕಟ್ಟೆಯಲ್ಲ, ಇದನ್ನು ಅಕ್ಷರಶಃ ಅರ್ಥಮಾಡಿಕೊಂಡಿದ್ದರು ಹೊಯ್ಸಳೇಶ್ವರ ವಿಷ್ಣುವರ್ಧನ ಮತ್ತು ಮಹಾರಾಣಿ ಶಾಂತಲಾ ದೇವಿಯವರು.

**ಪ್ರಶ್ನೆಗಳು:**

(i) ಶಿಲ್ಪಿ ಜಕಣಾಚಾರಿಯ ಬಗ್ಗೆ ವಿಷ್ಣುವರ್ಧನ ಹೊಂದಿದ್ದ ಅಭಿಪ್ರಾಯವೇನು? **[2]**

(ii) ಜಕಣಾಚಾರಿಯ ಆಶ್ರಮಕ್ಕೆ ಹೋಗಲು ವಿಷ್ಣುವರ್ಧನನನ್ನು ಶಾಂತಲೆಯು ಹೇಗೆ ಒಪ್ಪಿಸಿದಳು? **[2]**

(iii) ಶಿಲ್ಪಕಲಾಚಾರ್ಯ ಜಕ್ಕಣ್ಣನ ಪುಣ್ಯಾಶ್ರಮವನ್ನು ವರ್ಣಿಸಿ. **[3]**

(iv) ರಾಜ ವಿಷ್ಣುವರ್ಧನ ಹಾಗೂ ರಾಣಿ ಶಾಂತಲೆ ಶಿಲ್ಪಾಚಾರ್ಯರಿಗೆ ಹೇಗೆ ಸೇವೆಯನ್ನು ಸಲ್ಲಿಸಿದರು? ಅದಕ್ಕೆ ಶಿಲ್ಪಿಯು ಹೇಗೆ ಪ್ರತಿಕ್ರಿಯಿಸಿದರು? **[3]**

www.careerindia.com

## Question 13

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

ಜೀವನವೆಂಬುದು ದ್ವಂದ್ವಗುಣಗಳ ಸುಂದರ ಸಮ್ಮಿಶ್ರಣ ಬೇವು-ಬೆಲ್ಲ, ಹಗಲು ಇರುಳುಗಳಂತೆ ನೋವು ಇದೆ ನಲಿವೂ ಇದೆ. ಆದರೆ ಬದುಕೆಲ್ಲಾ ಬರಿಯ ಬೇವೂ ಅಲ್ಲ ಬರಿಯ ಬೆಲ್ಲವೂ ಅಲ್ಲ.

**ಪ್ರಶ್ನೆಗಳು:**

(i) ಶಾಂತಲೆಯು ತನ್ನ ಜೀವನದಲ್ಲಿ ಅನುಭವಿಸಿದ ದುರಂತಗಳನ್ನು ತಿಳಿಸಿ. **[2]**

(ii) ನೀಲಾಂಜನೆಯ ನೃತ್ಯ ಸನ್ನಿವೇಶದಿಂದ ಶಾಂತಲೆಯು ವೈರಾಗ್ಯದತ್ತ ಮನಸ್ಸು ಮಾಡಲು ಕಾರಣವೇನು? **[2]**

(iii) ಶಾಂತಲೆ ಮಹಾರಾಣಿಯು ಪಟ್ಟವನ್ನು ತೆಜಿಸಲು ಬಯಸಿದ್ದು ಏಕೆ? ಆಗ ವಿಷ್ಣುವರ್ಧನನ ಪ್ರತಿಕ್ರಿಯೆಯೇನು? **[3]**

(iv) ಶಾಂತಲೆಯು ಪ್ರಾಣಾರ್ಪಣೆ ಮಾಡಿದ ಸಂದರ್ಭವನ್ನು ವರ್ಣಿಸಿ. **[3]**

**ಹೂವಿ – ನಾಟಕ – DRAMA - HOOVI**

**(ಹೆಚ್. ಎಸ್. ವೆಂಕಟೇಶ ಮೂರ್ತಿ) – (H.S.VENKATESH MURTHY)**

## Question 14

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

ಹೊನ್ನೆ ಕೋವಿನಲ್ಲಿ ಗೌಡರಮಗಳು ಬೆಳ್ಳಿ ತನ್ನ ಗೆಳತಿಯರ ಜೊತೆ ಹಗ್ಗದ ಆಟ ಆಡುತ್ತಿದ್ದಾಳೆ. ಆಡಿ ಆಡಿ ದಣಿದು ಎಲ್ಲರೂ ಹೊನ್ನೆಯ ಮರದಡಿ ಕುಸಿದು ಏದುಸಿರು ಬಿಡುತ್ತಿದ್ದಾರೆ.

**ಪ್ರಶ್ನೆಗಳು:**

(i) ಬೆಳ್ಳಿ ಹಾಗೂ ಆಕೆಯ ಸಖಿ ಹೂವಿನ ಪರಿಮಳದ ಬಗ್ಗೆ ಏನೆಂದು ಮಾತನಾಡಿಕೊಳ್ಳುತ್ತಾರೆ? **[2]**

(ii) ಸಖಿಯರು ತಂಗಾಳಿಮಾಮಾನಿಗೆ ಹೇಳಿದ್ದೇನು? **[2]**

(iii) ಕೈಗೆ ಸಿಕ್ಕ ಹೂವಿನ ಬಗ್ಗೆ ಬೆಳ್ಳಿ ಹಾಗೂ ಸಖಿಯರು ಏನೆಂದು ಮಾತನಾಡಿಕೊಂಡರು? **[3]**

(iv) ಗೌಡರ ಮಗನ ಹೆಸರೇನು? ಆತ ತಂಗಿಯೊಂದಿಗೆ ನಡೆಸಿದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ. **[3]**

www.careerindia.com

CAREERINDIA

## Question 15

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

> **ಪುಟ್ಟ:** (ಏದುಸಿರು ಬಿಡುತ್ತಾ) ಹೂವಿ ಹೂವಿ.... ಕೇಳಿದ್ಯಾ ವಿಷಯ....?
>
> **ಹೂವಮ್ಮ:** (ಕವಡೆ ಆಡುತ್ತಲೆ) ಏನು ವಿಷಯ ಪುಟ್ಟಕ್ಕಾ....?

**ಪ್ರಶ್ನೆಗಳು:**

(i) ಹೂವಿ ಪುಟ್ಟಿಗೆ "ಹೂವೇ ಇಲ್ಲ ಹೊನ್ನಿನ ಮಗ್ಗಿ ಹೇಳ್ತಿ" ಎಂದು ಏಕೆ ಹೇಳಿದಳು? **[2]**

(ii) ಪುಟ್ಟಿ ತನ್ನ ತಾಯಿಯ ಕುರಿತು ಹೇಳಿದ್ದೇನು? **[2]**

(iii) ಹೂವಿ ಮರವಾಗಿ ಪರಿವರ್ತನೆಯಾದ ಪ್ರಸಂಗವನ್ನು ವರ್ಣಿಸಿ. **[3]**

(iv) "ನಾನು ಹೂ ಮಾರೋಳು! ಮರ ಮಾರೋಳಲ್ಲ!" ಎಂದು ಪುಟ್ಟಿ ಯಾರಿಗೆ ಹೇಳಿದಳು? ಅದಕ್ಕೆ ಕಾರಣವೇನು? **[3]**

## Question 16

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ **ಕನ್ನಡದಲ್ಲಿ** ಉತ್ತರಿಸಿ:

> **ಹಾಡು ಜೋಕಾಲಿ ಜೀಕೋಣ । ಬೇಸರ ನೂಕೋಣ ॥**
>
> **ಮೋಡವ ತಾಕೋಣ । ಗೆಳತಿ ॥**
>
> **ಭಾರ ಬಿಸಾಕೋಣ । ಚಪ್ಪಾಳೆ ಹಾಕೋಣ ॥**
>
> **ತಂಗಾಳಿ ಸೋಕೋಣ । ಗೆಳತಿ ॥**

**ಪ್ರಶ್ನೆಗಳು:**

(i) ಬೆಳ್ಳಿ ಹೂವಿಯ ಯಾವ ರಹಸ್ಯವನ್ನು ಬಯಲು ಮಾಡಿದಳು? **[2]**

(ii) ಹೂವಿಯನ್ನು ಬೆಳ್ಳಿ ಹೇಗೆ ಹಿಂಸಿಸುತ್ತಾಳೆ? **[2]**

(iii) ಹೊನ್ನ ಇದ್ದಕ್ಕಿದ್ದಂತೆ ಕುದುರೆ ಏರಿ ಹೋಗಲು ಕಾರಣವೇನು? **[3]**

(iv) ಮರವಾದ ಹೂವಿಯ ಆರೈಕೆ ಮಾಡಿದವರು ಯಾರು? ಆಕೆ ಹೇಗೆ ಮಾನವ ರೂಪವನ್ನು ಮರಳಿ ಪಡೆದಳು? **[3]**

**************************

www.careerindia.com